
ತಮ್ಮ ಕೆಲಸವನ್ನು ಪ್ರಸ್ತುತ ಪಡಿಸಿರುವುದಲ್ಲದೇ ವರದಿಗಳನ್ನೂ ದಾಖಲಿಸಿದ್ದಾರೆ. ಅಲ್ಪಾರ ಕೆಲಸದಲ್ಲಿ ನೆಲದ ನಿಜದ ಅರಿವಿದೆ. ಪತ್ರಕರ್ತರಿಗಿರಬೇಕಾದ ಕುತೂಹಲವಿದೆ. ಮಾನವಶಾಸ್ತ್ರದ ಪ್ರಾಧ್ಯಾಪಕರಾಗಿ ಸಂಶೋಧಕರಿಗೆ ಬೇಕಾದ ಶಿಸ್ತೂ ಇದೆ. ಅದಕ್ಕೇ ಅಲ್ಪಾ ಷಾ ಭೀಮಾ ಕೋರೆಗಾಂವ್ ಪ್ರಕರಣದ ಬಗ್ಗೆ 550 ಪುಟಗಳ ಪುಸ್ತಕ ಬರೆದಿದ್ದಾರೆಂದರೆ, ಅದು ಕುತೂಹಲಕಾರಿಯಾದದ್ದೂ ಮೌಲಿಕವಾದದ್ದೂ ಆಗಿರಬೇಕು. ‘ದ ಇನ್‌ಕಾರ್ಸರೇಷನ್ಸ್ – ಭೀಮಾ ಕೋರೆಗಾಂವ್ ಅಂಡ್ ದ ಸರ್ಚ್ ಫರ್ ಡೆಮಾಕ್ರಸಿ ಇನ್ ಇಂಡಿಯಾ’ ಅನ್ನುವ ಪುಸ್ತಕ ಈ ಪ್ರಕರಣದ ಬಗ್ಗೆ ವಿಸ್ತಾರವಾಗಿ ಪರಿಶೀಲಿಸಿ ಬರೆದಿರುವ ಪುಸ್ತಕವಾಗಿದೆ.

ಪುಸ್ತಕವನ್ನು ಅಲ್ಪಾ ವಿಶಿಷ್ಟ ರೀತಿಯಲ್ಲಿ ಕಟ್ಟಿದ್ದಾರೆ. ಅದರ ಆರಂಭದ ಭಾಗಗಳಿಗೂ ಭೀಮಾ ಕೋರೆಗಾಂವ್ ಪ್ರಕರಣಕ್ಕೂ ನೇರವಾಗಿ ಏನೂ ಸಂಬಂಧವಿಲ್ಲ ಎನ್ನುವಂತೆ ಅವರು ಪ್ರಾರಂಭಿಸುತ್ತಾರೆ. ಮಾನವ ಹಕ್ಕುಗಳ ವಿರುದ್ಧವಾಗಿ ಈ ಇಡೀ ಪ್ರಕರಣವನ್ನು ದಾಖಲಿಸಲಾಗಿದೆ ಎಂದು ಸಾಂದರ್ಭಿಕವಾಗಿ ನಿರೂಪಿಸಲು ಅಲ್ಪಾ ಒಂದು ಭಿನ್ನ ತಂತ್ರವನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಒಟ್ಟು ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ಆಪಾದಿತರಾಗಿ ಜೈಲಿಗೆ ಕಳುಹಿಸಿದ ವ್ಯಕ್ತಿಗಳ ಸಂಖ್ಯೆ 16. ಇದನ್ನ ಅವರು ‘ಬಿಕೆ–16’ ಎಂದು ಕರೆಯುತ್ತಾರೆ. ಈ ಹದಿನಾರು ಜನರ ಮೇಲೆ ಎಡಪಂಥೀಯ ರಾಜಕಾರಣ ಮಾಡುತ್ತಾರೆಂದು ಸರ್ಕಾರ ಆಪಾದಿಸಿದೆ. ಅರ್ಬನ್ ನಕ್ಸಲ್‌ಗಳಾಗಿ ಭೀಮಾ ಕೋರೆಗಾಂವ್‌ನಲ್ಲಾದ ಹಿಂಸೆ ಹಾಗೂ ಪ್ರಧಾನ ಮಂತ್ರಿಗಳ ಹತ್ಯೆಗೂ ಈ ಹದಿನಾರು ಜನರು ಪಿತೂರಿ ನಡೆಸಿದ್ದರೆನ್ನುವುದು ಅವರುಗಳ ಮೇಲಿನ ಆಪಾದನೆ. ಇದನ್ನೇ ಪುಣೆ ಪೊಲೀಸರು ಮತ್ತು ಸರ್ಕಾರದ ತಂತ್ರಾಂಶಗಳು ವಾದಿಸುತ್ತಿವೆ. ಇದು ನಿಜವಲ್ಲ ಎಂದು ನಿರೂಪಿಸುವುದು ಹೇಗೆ?

ಮೊದಲಿಗೆ ಅಲ್ಪಾ ಈ ಘಟನೆಯಲ್ಲಿ ಆಪಾದಿತರಾಗಿರುವ ಜನರನ್ನು ಯಾವ ಸಂದರ್ಭದಲ್ಲಿ ಮತ್ತು ಹೇಗೆ ಸರ್ಕಾರ ಬಂಧಿಸಿತು ಎಂದು ವಿವರಿಸುತ್ತಾರೆ. ಅಲ್ಲಿಂದ ಮುಂದಕ್ಕೆ ಈ ಪ್ರಕರಣದಲ್ಲಿ ಆಪಾದಿತರಾಗಿರುವ ಮೂರು ಮುಖ್ಯ ಪಾತ್ರಧಾರಿಗಳ ಜೀವನ ಚರಿತ್ರೆಯನ್ನು ದಾಖಲಿಸುತ್ತಾರೆ. ಅಮೆರಿಕದ




ಪೌರತ್ವವನ್ನು ಹೊಂದಿದ್ದೂ ಅದನ್ನು ಕೈಬಿಟ್ಟು ಆದಿವಾಸಿಗಳ ನಡುವೆ ನ್ಯಾಯಕ್ಕಾಗಿ ಹೋರಾಡುತ್ತಿದ್ದ, ಅದಕ್ಕಾಗಿಯೇ ತಮ್ಮ ತಾಂತ್ರಿಕ ಶಿಕ್ಷಣವನ್ನು ಬದಿಗಿಟ್ಟು ವಕೀಲರಾಗಿ ತರಬೇತಿ ಪಡೆದು ವಕಾಲತ್ತು ಮಾಡುತ್ತಿದ್ದ ಸುಧಾ ಭಾರದ್ವಾಜ್: ಐಐಎಂ ಅಹಮದಾಬಾದಿನಿಂದ ಎಂ.ಬಿ.ಎ. ಮಾಡಿ, ಭಾರತ್ ಪೆಟ್ರೋಲಿಯಂನಂತಹ ಪ್ರತಿಷ್ಠಿತ ಸಂಸ್ಥೆಯಲ್ಲಿ ಉನ್ನತ ಹುದ್ದೆಯಲ್ಲಿ ಕೆಲಸ ಮಾಡಿ, ಐಐಟಿ ಮತ್ತು ಗೋವಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟಿನ ಪ್ರಾಧ್ಯಾಪಕರೂ, ಭೀಮರಾವ್ ಅಂಬೇಡ್ಕರ್ ಮೊಮ್ಮಗಳ ಪತಿಯೂ ಆದ ಬುದ್ಧಿಜೀವಿ ಆನಂದ್ ತೇಲ್ತುಂಬ್ಡೆ ಹಾಗೂ ಜಾರ್ಖಂಡದ ಆದಿವಾಸಿಗಳ ನಡುವೆ ಕೆಲಸ ಮಾಡುತ್ತ ತಮ್ಮ ಜೀವನ ಕಳೆಯುತ್ತಿದ್ದ ಫಾದರ್ ಸ್ಟ್ಯಾನ್ ಸ್ವಾಮಿ – ಇವರುಗಳ ಜೀವನಕಾಲದ ಕೆಲಸ ಮತ್ತು ಒಲವುಗಳನ್ನು